ನನ್ನ ಗಟ್ಟಿಯಾದ ನಂಬಿಕೆ.

◆ **ಕನಕರಾಜ್: ಯೂರೋಪ್‌ನ (ಮುಖ್ಯವಾಗಿ ಫ್ರೆಂಚ್ ಮತ್ತು ಉತ್ತರ ಅಮೆರಿಕದ) ಸ್ತ್ರೀವಾದಿ ಚಿಂತನೆಗಳಿಗೂ ಯೂರೋಪೇತರ (ನಿರ್ದಿಷ್ಟವಾಗಿ ದಕ್ಷಿಣ/ಲ್ಯಾಟಿನ್ ಅಮೆರಿಕದ) ಸ್ತ್ರೀವಾದಿ ಚಿಂತನೆಗಳಿಗೂ ನಡುವೆ ಹಲವು ವ್ಯತ್ಯಾಸಗಳಿವೆ ಎನ್ನುವ ಮಾತನ್ನು ಒಪ್ಪುವಿರಾ? ನಿಮ್ಮ ಬರಹಗಳನ್ನು ಕೆಲವು ವಿಮರ್ಶಕರು ಜುಡಿತ್ ಬಟ್ಲರ್ ಅವರ ಸ್ತ್ರೀವಾದಿ ಚಿಂತನೆಗಳೊಂದಿಗೆ ಹೋಲಿಸುತ್ತಾರೆ. ಆ ಕುರಿತು ನಿಮ್ಮ ಅಭಿಪ್ರಾಯವೇನು?**

ಖಂಡಿತ ವ್ಯತ್ಯಾಸಗಳಿವೆ. ಜುಡಿತ್ ಬಟ್ಲರ್ ಮೇಲೆ ನನಗೆ ಗೌರವ ಇದೆ. 1979ರಿಂದ 1989ರವರೆಗೂ ನಾನು ನ್ಯೂಯಾರ್ಕ್‌ನಲ್ಲಿ ಇದ್ದಾಗ ಸ್ತ್ರೀವಾದದ ಬೆಳವಣಿಗೆಯನ್ನು ತೀವ್ರವಾಗಿ ಗಮನಿಸಿದ್ದೆ. ಆಗ ಅಲ್ಲಿ ಸ್ತ್ರೀವಾದ ಬಿರುಗಾಳಿಯಂತೆ ರಭಸವಾಗಿತ್ತು. ನಮ್ಮ ಭಾಗದಲ್ಲಿ (ದಕ್ಷಿಣ ಅಮೆರಿಕದಲ್ಲಿ) ಸ್ತ್ರೀವಾದ ಅಂದು ಅಷ್ಟಾಗಿ ಬೆಳೆದಿರಲಿಲ್ಲ. ಆದರೆ, ಕಳೆದ ಹತ್ತು ವರ್ಷಗಳಲ್ಲಿ ಹೊಸ ಬಗೆಯ ಸ್ತ್ರೀವಾದ ನನ್ನ ನಾಡಲ್ಲಿ ಗಟ್ಟಿಯಾಗಿ ಬೆಳೆಯುತ್ತಿದೆ. ಗರ್ಭಪಾತದ ಸ್ವಾತಂತ್ರ್ಯವನ್ನು ಕಾನೂನಾಗಿಸಲು ಅಥವಾ ಲೈಂಗಿಕ ಅಲ್ಪಸಂಖ್ಯಾತರ ಹಕ್ಕುಗಳಿಗೆ ಮಾನ್ಯತೆ ದೊರಕಿಸಿಕೊಡಲು ಅದು ಹೋರಾಟ ನಡೆಸುತ್ತಿದೆ. ಹಾಗಾಗಿ ಸ್ತ್ರೀವಾದದ ಬಹುಮುಖ ಆಯಾಮಗಳು ಇಂದು ಅರಳುತ್ತಿವೆ. ಮುಖ್ಯವಾಗಿ, ನಾನಾ ಬಗೆಯ ಆಯಾಮಗಳನ್ನು ಇಂದಿನ ಸ್ತ್ರೀವಾದ ಸ್ವೀಕರಿಸಿದೆ, ಇದು ಆರೋಗ್ಯಕರ ಬೆಳವಣಿಗೆ.

◆ **ಪೆರುಂದೇವಿ: ನಿಮ್ಮ ಬರಹಗಳಲ್ಲಿ ರಾಜಕೀಯ ಸಂಗತಿ–ಬೆಳವಣಿಗೆಗಳ ಉಲ್ಲೇಖಗಳನ್ನು ಕಾಣಬಹುದು. ಈ ಕಾರಣಕ್ಕಾಗಿ ಪ್ರಭುತ್ವ ಅಥವಾ ರಾಜಕೀಯ ಪಕ್ಷಗಳಿಂದ ನಿಮಗೆ ಬೆದರಿಕೆಗಳು ಬಂದಿವೆಯೇ? ಬಂದಿದ್ದರೆ ಅವುಗಳನ್ನು ಹೇಗೆ ನಿಭಾಯಿಸಿದ್ದೀರಿ? ಪ್ರಭುತ್ವದ ನಿರಂಕುಶ ಅಧಿಕಾರವನ್ನು ವಿರೋಧಿಸುವ ಅರ್ಜೆಂಟೈನಾದ ಸಾಹಿತ್ಯದಲ್ಲಿ ಪುರುಷ ಬರಹಗಾರರ ಮತ್ತು ಸ್ತ್ರೀ ಬರಹಗಾರರ ಪ್ರತಿಭಟನೆಗಳಿಗೆ ವ್ಯತ್ಯಾಸಗಳಿವೆಯೇ? ಈ ವಾಸ್ತವವನ್ನು ಅಭಿವ್ಯಕ್ತಿಸುವಲ್ಲಿ ವ್ಯತ್ಯಾಸಗಳಿವೆಯೇ?**

ಬಲಪಂಥೀಯ ಪಕ್ಷದ 'ಹೊಸೆ ಲೊಪೆಜ್ ರೆಗಾ' ನೇತೃತ್ವದ ಆಡಳಿತ ಶುರುವಾದ (1974ರಲ್ಲಿ) ಮತ್ತು ಮಿಲಿಟರಿಯ ನಿರಂಕುಶ ಆಡಳಿತದ ಸಂದರ್ಭಗಳಲ್ಲಿ ನನ್ನ ಎರಡು ಪುಸ್ತಕಗಳು ಪ್ರಕಟವಾದವು. ಅನೇಕ ಹೋರಾಟಗಾರರು, ಬರಹಗಾರರು ಭೂಗತರಾಗಿದ್ದ ಸಮಯವದು. ಅವರಿಗೆಲ್ಲಾ ನನ್ನ ಕೃತಿಗಳು ಸ್ಫೂರ್ತಿ ನೀಡಿದ್ದವು ಎಂದು ಹೇಳಬಹುದು. **Strange Things Happen Here** ಮತ್ತು **He who searches** ಇವೇ ಆ ಎರಡು ಕೃತಿಗಳು. ಮಿಲಿಟರಿ ಆಡಳಿತದ ಉಚ್ಛ್ರಾಯ ಸಂದರ್ಭದಲ್ಲಿ 1979ರಲ್ಲಿ **Other Weapons** ಎಂಬ ಕೃತಿಯನ್ನು ಬರೆದೆ. ಆದರೆ, ಅದನ್ನು ಪ್ರಕಟಿಸುವುದು ಒತ್ತಟ್ಟಿಗಿರಲಿ, ಆತ್ಮೀಯರಿಗೆ ಓದಲು ಕೊಡಲೇ ಭಯಗೊಂಡಿದ್ದೆ. ಆ ವರ್ಷವೇ ನಾನು ಅರ್ಜೆಂಟೈನಾ ತೊರೆದು ಕೊಲಂಬಿಯಾ ವಿಶ್ವವಿದ್ಯಾಲಯದ ಆಹ್ವಾನದ ಮೇರೆಗೆ ಅಮೆರಿಕಕ್ಕೆ ಹೋದೆ.

ಇನ್ನು ನಿಮ್ಮ ಎರಡನೇ ಪ್ರಶ್ನೆಗೆ ಉತ್ತರಿಸುವುದಾದರೆ – ಅಧಿಕಾರ, ಮಹತ್ವಾಕಾಂಕ್ಷೆ, ರಾಜಕೀಯ, ಈ ಮೂರೂ ಸಮಾನಾರ್ಥಕ ಪದಗಳು. ಸ್ತ್ರೀ ಬರಹಗಾರರು, ನನ್ನನ್ನೂ ಸೇರಿಸಿ ಕೆಲವರು, ಕಣ್ಣೆದುರಿಗಿನ ವಾಸ್ತವವನ್ನು

> ಬರಹಗಾರರೊಳಗಿರುವ ಮಗು ಎನ್ನುವ ಮಾತಲ್ಲಿ ನನಗೆ ನಂಬಿಕೆಯಿಲ್ಲ... ಆದರೂ ಯಾರಿಗೆ ಗೊತ್ತು, ಇದ್ದರೂ ಇರಬಹುದೇನೊ!